ಆ) ವೈದ್ಯರ ಕೊರತೆ ಇರುವುದಿಲ್ಲ. ಇತರೆ ಖಾಲಿ ಇರುವ ಹುದ್ದೆಗಳನ್ನು 1995-96ರ ಸಾಲಿನ ಸಾಮಾನ್ಯ ವರ್ಗಾವಣೆ ಸಮಯದಲ್ಲಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ವಿಷಯ:- ರಾಜ್ಯದಲ್ಲಿ ವಿವಿಧ ಮಾಧ್ಯಮವುಳ್ಳ ಶಾಲೆಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲ ಪ್ರಶ್ನೆ ಸಂಖ್ಯೆ : 256(100)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಉರ್ದು, ಮರಾಠಿ, ತೆಲಗು, ತಮಿಳು, ಇಂಗ್ಲಿಷ್, ಗುಜರಾತಿ ಹಾಗೂ ಕನ್ನಡ ಮಾಧ್ಯಮ ನರ್ಸರಿ, ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳ ಸಂಖ್ಯೆ ಎಷ್ಟು?

ಆ) ಇವುಗಳಲ್ಲಿ ಸರಕಾರಿ ಹಾಗೂ ಖಾಸಗಿ ಶಾಲೆಗಳೆಷ್ಟು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

	ನರ್ಸರಿ		ಪ್ರಾಥಮಿಕ		ಪ್ರೌಢಶಾಲೆ	
	ಖಾಸಗಿ	ಸರ್ಕಾರಿ	ಖಾಸಗಿ	ಸರ್ಕಾರಿ	ಖಾಸಗಿ	ಸರ್ಕಾರಿ
1) ಉರ್ದು	834	40	185	2404	104	23
2) ಮರಾಠಿ	171	30	31	699	76	—
3) ತೆಲಗು	06	04	22	74	02	03
4) ತಮಿಳು	26	04	112	140	04	—
5) ಇಂಗ್ಲಿಷ್	469	—	220	02	2459	—
6) ಗುಜರಾತಿ	—	—	02	01	—	—
7) ಕನ್ನಡ	2113	1115	5320	27126	3516	10510
8) ಮಲಯಾಳಂ	—	—	05	03	—	—

ವಿಷಯ:- ಪ್ರಾಥಮಿಕ ಆರೋಗ್ಯ ಘಟಕ ಸ್ಥಾಪನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 258(623)

ಶ್ರೀ ಕೆ.ಎನ್.ನಾಗೇಗೌಡ (ಕಿರುಗಾವಲು):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮುಂದಿನ ಸಾಲಿನಿಂದ ಎಷ್ಟು ಪ್ರಾಥಮಿಕ ಆರೋಗ್ಯ ಘಟಕಗಳನ್ನು ಸ್ಥಾಪಿಸಲಾಗುವುದು, ಅವಶ್ಯಕತೆ ಎಷ್ಟಿದೆ ಹಾಗೂ ಅವುಗಳನ್ನು ಎಷ್ಟು ವರ್ಷಗಳಲ್ಲಿ ಸ್ಥಾಪಿಸಲಾಗುವುದು?

ಡಾ: ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ದಿನಾಂಕ 1-4-1987ರಿಂದ ರಾಜ್ಯದಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಸ್ಥಾಪಿಸುವುದನ್ನು ಸ್ಥಗಿತಗೊಳಿಸಲಾಗಿದೆ.

ವಿಷಯ:- ರಾಜ್ಯದ ಸರ್ಕಾರಿ ಶಾಲೆಗಳ ಅಧ್ಯಾಪಕರ ಕೊರತೆ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 259(586)

ಶ್ರೀ ಕೆ.ಎನ್.ನಾಗೇಗೌಡ(ಕಿರುಗಾವಲು):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಲೆಗಳಲ್ಲಿ (ಪ್ರಾಥಮಿಕ ದಿಂದ ಪ್ರೌಢ ಶಾಲೆಯವರೆಗೆ) ಅಧ್ಯಾಪಕರ ಕೊರತೆ ಇರುವುದು ರಾಜ್ಯದಲ್ಲಿ ಕಂಡು ಬಂದಿದೆಯೇ?

ಆ) ಸರ್ಕಾರ ತುಂಬಲು ಏನು ಕ್ರಮ ತೆಗೆದುಕೊಳ್ಳುತ್ತದೆ?

ಇ) ಇದರಲ್ಲಿ ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಅಧ್ಯಾಪಕರನ್ನು ಸದರಿ ಶಾಲೆಗಳಲ್ಲಿ ನೇಮಿಸಲಾಗುವುದು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-
ಅ) ಕೆಲವು ಕಡೆ ಕೊರತೆ ಇರುವುದು ಕಂಡು ಬಂದಿದೆ.